ದಿನಾಂಕ : 05/04/2022
ಡಿ.ಡಬ್ಲ್ಯೂ : 3

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ. ನ್ಯಾಯಾಲಯ, ಮದ್ದೂರು.**

**ಓ.ಎಸ್. ಸಂಖ್ಯೆ: 44/2020**

**ಆದೇಶ 10 ಸಿಪಿಸಿ ಪ್ರಕಾರ ನೇ ಪ್ರತಿವಾದಿಯ ವಿಚಾರಣೆ :**

**ಸಾಕ್ಷಿದಾರರ ಹೆಸರು : ಶ್ರೀ ಚನ್ನಬಸವಯ್ಯ,**
**ತಂದೆಯ ಹೆಸರು : ಶ್ರೀ ದಿವಂಗತ ದೇವಯ್ಯ,**
**ವಯಸ್ಸು : 68 ವರ್ಷ,**
**ಉದ್ಯೋಗ : ನಿವೃತ್ತ ಬಿ.ಎಂ.ಟಿ.ಸಿ. ಸಂಚಾರಿ ನಿಯಂತ್ರಕ,**
**ವಾಸ ಸ್ಥಳ : ಬೆಂಗಳೂರು.**

**ಪ್ರತಿವಾದಿಯನ್ನು ದಿನಾಂಕ:05/04/2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ವಿಚಾರಣೆ:**

ವಾದಿ ನನ್ನ ಸ್ವಂತ ತಮ್ಮನ ಮಗ. 1 ನೇ ಪ್ರತಿವಾದಿ ನನ್ನ ಸ್ವಂತ ತಮ್ಮ. ಮೃತ 2 ನೇ ಪ್ರತಿವಾದಿ ನನ್ನ ಸ್ವಂತ ಅಣ್ಣ. ವಾದಿಯ ತಂದೆ, ಪ್ರತಿವಾದಿ 1 ಮತ್ತು 2 ಹಾಗೂ ನಾನು ದಿವಂಗತ ದೇವಯ್ಯರವರ ಮಕ್ಕಳು ಎಂಬುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ತಂದೆಗೆ ನಾವು ಮೂರು ಜನ ಹೆಣ್ಣು ಮಕ್ಕಳು ಮತ್ತು ನಾಲ್ಕು ಜನ ಗಂಡು ಮಕ್ಕಳು ಎಂಬುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ದೊಡ್ಡತಾಯಮ್ಮ, ಚಿಕ್ಕತಾಯಮ್ಮ ಮತ್ತು ಮಂಗಳಗೌರಮ್ಮ ನನ್ನ ಸಹೋದರಿಯರು ಎಂಬುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮಾದಮ್ಮ ನನ್ನ ತಾಯಿ

ದಿನಾಂಕ : 05/04/2022
ಡಿ.ಡಬ್ಲ್ಯೂ : 3

ಎಂಬುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ತಾತನ ಹೆಸರು ಕೆಂಪಯ್ಯ ಮತ್ತು ನನ್ನ ಅಜ್ಜಿಯ ಹೆಸರು ಕೆಂಪಮ್ಮ ಎಂಬುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ತಾತ ಕೆಂಪಯ್ಯರವರಿಗೆ ಚರ ಮತ್ತು ಸ್ಥಿರ ಆಸ್ತಿಗಳಿದ್ದು, ಅವು ಒಟ್ಟು ಕುಟುಂಬದ ಆಸ್ತಿಗಳು ಎಂಬುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ದಾವಾ ಆಸ್ತಿ 1 ಮತ್ತು 4 ಹಾಗೂ ಸೀರಂಗದೊಡ್ಡಿ ಗ್ರಾಮದ ಪಕ್ಕದಲ್ಲಿರುವ ಬೂದುಗುಪ್ಪೆ ಗ್ರಾಮದ ಸರ್ವೆ ನಂ.90/1 (ಈಗ ಇದರಲಿಲ ಬೇರೆ ಬೇರೆ ಪೋಡ್ ಆಗಿರುತ್ತದೆ) ಹಾಗೂ ಬೂದುಗುಪ್ಪೆ ಗ್ರಾಮದಲ್ಲಿ ಬಸವೇಶ್ವರ ದೇವಸ್ಥಾನದ ಹಿಂಭಾಗದಲ್ಲಿ ಇರುವ ವಾಸದ ಮನೆ ಸೇರಿದಂತೆ ಈ ಆಸ್ತಿಗಳು ನನ್ನ ಅಜ್ಜಿ ಕೆಂಪಮ್ಮ ಖರೀದಿಸಿದ ಆಸ್ತಿಗಳಾಗಿರುತ್ತವೆ. ದಾವಾ ಆಸ್ತಿ 2 ಮತ್ತು 3 ನಮ್ಮ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಅದೇ ರೀತಿ ಮದ್ದೂರು ಗ್ರಾಮದ ಸರ್ವೆ ನಂ.546, 547, 548, 550 ಹಾಗೂ ಬೂದುಗುಪ್ಪೆ ಗ್ರಾಮದ ಎರಡು ವಾಸದ ಮನೆಯೂ ಸಹ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ದಾವಾ ಆಸ್ತಿ 5 ಮತ್ತು 6 ನಮ್ಮ ಕುಟುಂಬದ ಆಸ್ತಿಗಳಾಗಿರುವುದಿಲ್ಲ. ಇವುಗಳನ್ನು ನನ್ನ ಅಣ್ಣ ದಿವಂಗತ 2ನೇ ಪ್ರತಿವಾದಿ ಖರೀದಿಸಿರಬಹುದು ಆದರೆ ನನಗೆ ನಿಖರವಾಗಿ ಗೊತ್ತಿಲ್ಲ. ಎಲ್ಲಾ ದಾವಾ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂಬುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ನಾನು ಮತ್ತು ನನ್ನ ಸಹೋದರರು ಈ ಹಿಂದೆ ಒಟ್ಟು ಕುಟುಂಬದಲ್ಲಿ ಇದ್ದು ನಂತರ 1987ರಲ್ಲಿ ಪಂಚಾಯಿತಿ ಪಾಲುಪರಿಕತ್ತಿನ ಪ್ರಕಾರ ವಿಭಾಗ ಮಾಡಿಕೊಂಡಿರುತ್ತೇವೆ. ಅದೇ ಪ್ರಕಾರ ಆರ್.ಟಿ.ಸಿ., ಪಹಣಿ ಪತ್ರಗಳು ಬರುತ್ತಿವೆ.

ದಿನಾಂಕ : 05/04/2022

ಡಿ.ಡಬ್ಲ್ಯೂ : 3

ನಾನು ಮತ್ತು ಮೃತ 2ನೇ ಪ್ರತಿವಾದಿ ಮೋಸದಿಂದ ಖಾತೆ ಮಾಡಿಸಿಕೊಂಡಿರುತ್ತೇವೆ ಎಂಬುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಸರ್ವೆ ನಂ.1/7ಬಿ ರಲ್ಲಿ 10 ಗುಂಟೆ ವಾದಿಯ ತಂದೆಗೆ ಮತ್ತು 30 ಗುಂಟೆ 2ನೇ ಪ್ರತಿವಾದಿಗೆ ಹೋಗಿರುತ್ತದೆ. ನನಗೆ ಸದರಿ ಸರ್ವೆ ನಂ.1/7ಬಿ ರಲ್ಲಿ 10 ಗುಂಟೆ ಬಂದಿರುತ್ತದೆ ಎಂಬುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ವಾದಿಗೆ ದಾವಾ ಆಸ್ತಿ 5 ಮತ್ತು 6ರಲ್ಲಿ 1/4ನೇ ಭಾಗ ಇರುತ್ತದೆ ಎಂಬ ವಿಚಾರವನ್ನು ನಾನು ಒಪ್ಪಿಕೊಳ್ಳುವುದಿಲ್ಲ. 1ನೇ ದಾವಾ ಆಸ್ತಿಯಲ್ಲಿ 12 ಅಡಿ ಜಾಗಕ್ಕೆ ಸಂಬಂಧಿಸಿದಂತೆ ನಾನು ವಾದಿಗೆ ತೊಂದರೆ ಕೊಡುತ್ತಿದ್ದೇನೆ ಎಂಬುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಪಾಲುಪರಿಕತ್ತಿನ ಪ್ರಕಾರ 1ನೇ ದಾವಾ ಆಸ್ತಿಯಲ್ಲಿ ತಿರುಗಾಡಲು ದಾರಿ ಬಿಡಲಾಗಿತ್ತು ಆದರೆ ವಾದಿಯು ಈ ರೀತಿ 12 ಅಡಿ ಜಾಗ ಬಿಡಲಾಗಿದೆ ಎಂದು ತಕರಾರು ಮಾಡಿದ ಕಾರಣ ಈ ವ್ಯಾಜ್ಯವು ಹುಟ್ಟಿಕೊಂಡಿರುತ್ತದೆ. 4ನೇ ದಾವಾ ಆಸ್ತಿಯಲ್ಲಿ ನನ್ನ ಪಾಲಿಗೆ 30 ಗುಂಟೆ ಜಮೀನು ಬಂದಿದ್ದು, ಪಾಲುಪರಿಕತ್ತಿನ ಪ್ರಕಾರ ದಾರಿ ಬಿಡಲಾಗಿದೆ ಆದರೆ ವಾದಿಯು ಸದರಿ ದಾರಿಯನ್ನು ನನಗೆ ಉಪಯೋಗಿಸಲು ಬಿಡುತ್ತಿಲ್ಲ. ಮೃತ ನಾಗರಾಜಯ್ಯರವರಿಗೆ ಇಬ್ಬರು ಗಂಡು ಮಕ್ಕಳಿದ್ದು, ಅವರ ಹೆಸರು ಅಜಯ್ ಡಿ.ಎನ್. ಹಾಗೂ ಮಹೇಶ್ ಡಿ.ಎನ್. ಆಗಿರುತ್ತದೆ. ಅವರ ಪತ್ನಿಯ ಹೆಸರು ಶ್ರೀಮತಿ ಮಹದೇವಮ್ಮ ಆಗಿರುತ್ತದೆ. ಸದರಿ ಡಿ.ಎನ್. ಅಜಯ್ ಬಿನ್ ಡಿ.ನಾಗರಾಜಯ್ಯ ದತ್ತು ಹೋಗಿರುತ್ತಾರೆ ಎಂಬ ವಿಚಾರ ನನಗೆ ಗೊತ್ತಿಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.